**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.269/2021**

ಪಿ.ಡಬ್ಲ್ಯೂಃ **1**
ಸಿ.ಡಬ್ಲ್ಯೂಃ 1

| | | |
|---|---|---|
| ಹೆಸರು | ಃ | ರಘುನಾಥ್ ಎಸ್ ವಿ |
| ತಂದೆಯ ಹೆಸರು | ಃ | ವೀರಭದ್ರಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಪಿ ಎಸ್ ಐ ಎ ಜಿ ಪಿ ಕಛೇರಿ |
| ವಾಸಸ್ಥಳ | ಃ | ಮಂಗಳೂರು |

**ದಿನಾಂಕಃ 28-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ದಿಃ **15-11-2019** ರಿಂದ **23-07-2021** ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 03-09-2020 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಕರಕುಚ್ಚಿ ವಾಸಿ ಪ್ರಭಾಕರ್ ಎಂಬುವವರು ತಮ್ಮ ಟ್ರಾಕ್ಟರ್ ನಲ್ಲಿ ಅಕ್ರಮವಾಗಿ ಭದ್ರಾ ಹೊಳೆಯಲ್ಲಿ ಮರಳು ತುಂಬಿಕೊಂಡು ಬಾವಿಕೆರೆ ಕಡೆಗೆ ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದು, ಚಾಸಾ-8, 9 ಮತ್ತು 10 ರವರಿಗೆ ವಿಷಯ ತಿಳಿಸಿ, ಅವರನ್ನು ಕರೆದುಕೊಂಡು ರಾತ್ರಿ 10-30 ಗಂಟೆಗೆ ಬಾವಿಕೆರೆಯ ಗಂಜಿಕೆರೆಯ ರಸ್ತೆಯ ಹತ್ತಿರ ಬಂದಿದ್ದು, ಅಲ್ಲೇ ಇದ್ದ ಚಾಸಾ-2 ಮತ್ತು 3 ರವರಿಗೆ ನೋಟೀಸು ನೀಡಿ, ಧಾಳಿಯ ಬಗ್ಗೆ ಮಾಹಿತಿ ತಿಳಿಸಿ ಅವರನ್ನು ಕರೆದುಕೊಂಡು 10-50 ಗಂಟೆಗೆ ಬಾವಿಕೆರೆ ಬಸ್ ನಿಲ್ದಾಣದ ಹತ್ತಿರ ಹೋಗಿ ಕಾಯುತ್ತಿದ್ದು, ಕರಕುಚ್ಚಿ ಕಡೆಯಿಂದ ಒಂದು ಟ್ರಾಕ್ಟರ್ ಬರುತ್ತಿದ್ದು, ನಮ್ಮನ್ನು ನೋಡಿ ಓಡಿ ಹೋಗಿದ್ದು, ನಂತರ ನಮ್ಮ ಸಿಬ್ಬಂಧಿಯವರು ಅವರನ್ನು ಹಿಡಿದುಕೊಂಡು ಬಂದಿದ್ದು, ನಂತರ ಅವರ ಹೆಸರು ವಿಳಾಸ ಕೇಳಲಾಗಿ ಚಾಲಕನ ಹೆಸರು ಪ್ರಭಾಕರ ಬಿನ್ ಬಸವರಾಜಪ್ಪ, ಕರಕುಚ್ಚಿ

ವಾಸಿ, ಇನ್ನೊಬ್ಬ ಉಮ್ಲನಾಯ್ಕ ಬಿನ್ ಗಂಗ್ಯನಾಯ್ಕ, ವಾಸ ಕರಕುಚ್ಚಿ ಎಂದು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಟ್ರಾಕ್ಟರ್ ನ್ನುಪರಿಶೀಲಿಸಲಾಗಿ ಟ್ರಾಕ್ಟರ್ ನಂ. ಕೆಎ 66 ಟಿ 0945 ಆಗಿದ್ದು, ನಂತರ ಟ್ರ್ಯಾಲಿಯನ್ನು ಪರಿಶೀಲಿಸಲಾಗಿ ಅದರಲ್ಲಿ ಮರಳು ತುಂಬಿದ್ದು, ಸುಮಾರು 3000 ಮೌಲ್ಯದ ಮರಳು ಇರುವುದಾಗಿ ಪಂಚರು ತಿಳಿಸಿದ್ದು, ನಂತರ ಅವರಿಗೆ ಪರವಾನಗಿ ಇದೆಯೇ ಎಂದು ಕೇಳಲಾಗಿ, ಇಲ್ಲ ಎಂದು ತಿಳಿಸಿದ್ದು, ಸರ್ಕಾರಕ್ಕೆ ಯಾವುದೇ ರಾಜಧನವನ್ನು ಪಾವತಿ ಮಾಡದೇ ಮರಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದ್ದು, ನಂತರ ಅಲ್ಲಿಯೇ ಚಾಸಾ-8 ರವರ ಹಸ್ತ 10-50 ರಿಂದ 11-00 ರವರೆಗೆ ವರದಿಯನ್ನು ತಯಾರಿಸಿ, ಠಾಣೆಗೆ ಕಳುಹಿಸಿರುತ್ತೇನೆ. ನಂತರ ಚಾಸಾ-11 ರವರು ಕರೆ ಮಾಡಿ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ನೀಡಿದ್ದರಿಂದ ನಂತರ ಪಂಚರ ಸಮಕ್ಷಮ ರಾತ್ರಿ 12-00 ರಿಂದ 1-00 ಗಂಟೆಯ ವರೆಗೆ ಮಹಜರ್ ಕ್ರಮವನ್ನು ಜರುಗಿಸಿ, ಆರೋಪಿ ಮತ್ತು ಮಾಲುಗಳೊಂದಿಗೆ ಠಾಣೆಗೆ ರಾತ್ರಿ 1-30 ಗಂಟೆಗೆ ಬಂದಿರುತ್ತೇನೆ. ನಂತರ ಆರೋಪಿ 1 ಮತ್ತು 2 ರವರ ಸ್ವಇಚ್ಚಾ ಹೇಳಿಕೆಯನ್ನು ಪಡೆದುಕೊಂಡು ದಸ್ತಗಿರಿ ಪ್ರಕ್ರಿಯೆ ಮಾಡಿ ಠಾಣೆಯಲ್ಲಿ ಸೂಕ್ತ ಭದ್ರತೆಯೊಂದಿಗೆ ಇಟ್ಟಿರುತ್ತೇನೆ. ನಂತರ ಠಾಣಾ ಮಾಲುಪಟ್ಟಿಯಲ್ಲಿ ಟ್ರಾಕ್ಟರ್ ಮತ್ತು 3 ಸಾವಿರ ಮೌಲ್ಯದಷ್ಟು ಮೌಲ್ಯದ ಮರಳನ್ನು ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕಃ 04-09-2020 ಬೆಳಿಗ್ಗೆ 9-00 ರಿಂದ 10-00 ರವರಿಗೆ ಆರೋಪಿಗಳು ಮರಳು ತುಂಬಿದ ಜಾಗವನ್ನು ತೋರಿಸಿದ್ದರಿಂದ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಲ್ಲಿ 1 ಕೆಜಿ ಮರಳನ್ನು ಸೀಜ್ ಮಾಡಿಕೊಂಡು ಬಂದಿರುತ್ತೇನೆ. ನಂತರ 10-30 ಗಂಟೆಗೆ ಠಾಣೆಗೆ ಬಂದುಆರೋಪಿಗಳನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದೇ ದಿನ ಚಾಸಾ-8 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 10-09-2020 ರಂದು ಚಾಸಾ-9 ರವರು ನೀಡಿದ 65 ಬಿ ದೃಢೀಕರಣ ಪತ್ರವನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿಃ11-09-2020 ರಂದು 1 ನೇ ಆರೋಪಿರವರ ಅಮಾನತ್ತುಪಡಿಸಿಕೊಂಡ ಟ್ರಾಕ್ಟರನ್ನು ನ್ಯಾಯಾಲಯದಿಂದ ಬಿಡುಗಡೆ ಆದೇಶ ಪತ್ರ ತಂದಿದ್ದು, ಅದೇ ದಿನ ಟ್ರಾಕ್ಟರನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 14-09-2020 ರಂದು ಚಾಸಾ-6 ರವರಿಗೆ ಮರಳಿನ ಮೌಲ್ಯದ ಬಗ್ಗೆ ಮನವಿ

ಪತ್ರವನ್ನು ಸಲ್ಲಿಸಿಕೊಂಡಿರುತ್ತೇನೆ ಮತ್ತು ಅದೇ ದಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ತರೀಕೆರೆಯವರಿಗೆ ಮರಳು ತುಂಬಿದ ಜಾಗದ ಬಗ್ಗೆ ದಾಖಲೆ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-11 ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪಂಚರಿಗೆ ನೀಡಿದ ಎರಡು ನೋಟೀಸ್ ಆಗಿದ್ದು, ಸದರಿ ದಾಖಲೆಯನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4(ಎ) ಮತ್ತು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮೂರು ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಿಂದ 8 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸಿಡಿ ಆಗಿದ್ದು, ಸದರಿ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು 65 ಬಿ ದೃಡೀಕರಣ ಪತ್ರವಾಗಿದ್ದು, ಸದರಿ ದಾಖಲೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ದಿಃ 14-09-2020 ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮರಳಿನ ಮೌಲ್ಯದ ಬಗ್ಗೆ ವರದಿ ನೀಡಲು ಭೂ ದಾಖಲೆಗಳ ಕಾರ್ಯಪಾಲಕ ಅಭಿಯಂತರರಿಗೆ ನೀಡಿದ ಮನವಿ ಪತ್ರ ಆಗಿದ್ದು, ಸದರಿ ದಾಖಲೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸ್ಥಳದ ಬಗ್ಗೆ ಪರಿಶೀಲನೆ ನಡೆಸಿ ದಾಖಲೆ ನೀಡುವಂತೆ ಬರೆದ ಮನವಿ ಪತ್ರ ಆಗಿದ್ದು, ಸದರಿ ದಾಖಲೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಕೆಪಿ ವಕೀಲರಿಂದ.**

ನಿಮಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಚಾಸಾ-8 ರಿಂದ 10 ರವರನ್ನು ಧಾಳಿ ಮಾಡಲು ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಧಾಳಿ ಮಾಡಿದ ಜಾಗದಲ್ಲಿ ಯಾವುದೇ ಟ್ರಾಕ್ಟರ್ ಓಡಾಡುತ್ತಿರಲಿಲ್ಲ ಮತ್ತು ಅಲ್ಲಿ ಯಾರೂ ಓಡಿ ಹೋಗಲು ಪ್ರಯತ್ನಿಸಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಅವರನ್ನು ಸೃಷ್ಠಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಪಂಚರಿಗೆ ಹೆದರಿಸಿ ಮಾಹಿತಿ ತಿಳಿದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಚಾಸಾ-8 ರವರಿಂದ ವರದಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಹೇಳಿಕೆಯನ್ನು ಹೆದರಿಸಿ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಯಾವುದೇ ಸೀಜ್ ಮಾಡಿಲ್ಲ ಎಂದರೆ ಸರಿಯಲ್ಲ ರಾತ್ರಿ 1-00 ಗಂಟೆ ಸಮಯದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-9 ರವರಿಂದ ಯಾವುದೇ ದೃಢೀಕೃತ ಪತ್ರವನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಮರಳಿನ ಮೌಲ್ಯವನ್ನು

ಯಾವುದೇ ಮನವಿ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನೀವು ಮತ್ತು ಮರಳಿನ ಪೌಲ್ಯ ಮಾಪಕರು ಹಾಗೂ ಭೂ ದಾಖಲೆಗಳ ಕಾರ್ಯಪಾಲಕರು ಸೇರಿ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಮರಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಠಾಣೆಯ ಅಂಕಿಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**